# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ಸಂ. 333/1, ಮೊದಲನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110
ದೂ. : 080-29566001, 080-27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

ಸಂ.ಬಿಐಎಪಿಎ/ಟಿಪಿ01/ಸಿಸಿ/30/2017-18 |1400 ದಿನಾಂಕ: 13 JAN 2021

## "ಪ್ರಾರಂಭಿಕ ಪ್ರಮಾಣ ಪತ್ರ"

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15(1) ರನ್ವಯ)
(ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ನಿಯಮಗಳ 1965 ರ ನಿಯಮ 30 ನಮೂನೆ 3 ರನ್ವಯ)

ವಿಷಯ: ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ಹುತ್ತನಹಳ್ಳಿ ಗ್ರಾಮದ ಸ.ನಂ. 111/1 ರಲ್ಲಿ 1ಎ-20ಗು, 111/2 ರಲ್ಲಿ 0ಎ-37ಗು, 112/1 ರಲ್ಲಿ 2ಎ-37ಗು, 112/2 ರಲ್ಲಿ 0ಎ-20ಗು, 122 ರಲ್ಲಿ 5ಎ-05ಗು, 123/1 ರಲ್ಲಿ 2ಎ-23.04ಗು, 123/3 ರಲ್ಲಿ 0ಎ-26ಗು, 123/4 ರಲ್ಲಿ 1ಎ-29ಗು, 126/1 ರಲ್ಲಿ 0ಎ-20ಗು, 171 ರಲ್ಲಿ 2ಎ-0ಗು, 172 ರಲ್ಲಿ 2ಎ-0ಗು ಮತ್ತು 173 ರಲ್ಲಿ 3ಎ-28ಗು ಒಟ್ಟು 24ಎಕರೆ-05.04 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ಈ ಹಿಂದೆ ಅನುಮೋದಿಸಲಾಗಿರುವ ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆಗೆ ಹೆಚ್ಚುವರಿಯಾಗಿ, ಸ.ನಂ 60/1 ರಲ್ಲಿ 0ಎ-28ಗು, 60/2 ರಲ್ಲಿ 0ಎ-27ಗು, 60/3 ರಲ್ಲಿ 0ಎ-27ಗು, 60/4ಪಿ ರಲ್ಲಿ 0ಎ-13ಗು, 61 ರಲ್ಲಿ 0ಎ-26ಗು, 122/2 ರಲ್ಲಿ 0ಎ-19ಗು, 122/3 ರಲ್ಲಿ 1ಎ-00ಗು, 123/1 ರಲ್ಲಿ 0ಎ-33ಗು, 123/2 ರಲ್ಲಿ 1ಎ-05ಗು, 126/1 ರಲ್ಲಿ 0ಎ-18ಗು, 126/1 ರಲ್ಲಿ 1ಎ-20ಗು, 126/2 ರಲ್ಲಿ 0ಎ-05ಗು, 126/3 ರಲ್ಲಿ 0ಎ-06ಗು, 127 ರಲ್ಲಿ 2ಎ-00ಗು, 128 ರಲ್ಲಿ 1ಎ-03ಗು, 129ಪಿ ರಲ್ಲಿ 2ಎ-00ಗು, 130/1ಪಿ ರಲ್ಲಿ 2ಎ-10ಗು, 131/1 ರಲ್ಲಿ 2ಎ-11ಗು, 174 ರಲ್ಲಿ 1ಎ-38ಗು, 175 ರಲ್ಲಿ 3ಎ-35ಗು, 176 ರಲ್ಲಿ 3ಎ-36ಗು, 177 ರಲ್ಲಿ 2ಎ-16ಗು ಒಟ್ಟು 30ಎ-16ಗು ಸೇರಿ ಒಟ್ಟಾರೆಯಾಗಿ 54ಎ-21.04ಗು ಅಥವಾ 220677.06 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಅನುಮೋದನೆ ನೀಡಿರುವ ವಸತಿ ಉಪಯೋಗದ "ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ" ಸೂಚಿಸಲಾದ ಒಟ್ಟು 343 ವಸತಿ ಘಟಕ (ವಿಲ್ಲಾ) ಕಟ್ಟಡಗಳನ್ನು ನಿರ್ಮಿಸುವ ಸಂಬಂಧ ಪ್ರಾರಂಭಿಕ ಪ್ರಮಾಣ ಪತ್ರವನ್ನು ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:

| | |
|---|---|
| 1) ಅರ್ಜಿದಾರರ ಮನವಿ ದಿನಾಂಕ : | 11/11/2020. |
| 2) ಈ ಪ್ರಾಧಿಕಾರದ ಸಮ ಸಂಖ್ಯೆಯ ಪತ್ರ ದಿನಾಂಕ: | 12/01/2021. |
| 3) ಈ ಪ್ರಾಧಿಕಾರದ ಪತ್ರ ಸಂಖ್ಯೆ ಮತ್ತು ದಿನಾಂಕ: | ಬಿಐಎಪಿಎ/ಟಿಪಿ1/ಡಿಪಿ/17/2012-13/1398, ದಿನಾಂಕ: 13/01/2021 |
| 4) ಪ್ರಾಧಿಕಾರಕ್ಕೆ ಶುಲ್ಕವನ್ನು ಪಾವತಿಸಿರುವ ವಿವರ : | ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ 0010287, ದಿನಾಂಕ: 13/01/2021, ರಂತೆ ಒಟ್ಟು ರೂ 1,13,03,700/- (ಒಂದು ಕೋಟಿ ಹದಿಮೂರು ಲಕ್ಷದ ಮೂರು ಸಾವಿರದ ಏಳು ನೂರು ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಿರುತ್ತಾರೆ. |

*****************

ಶ್ರೀ ಬಿ.ಎಂ. ಕರುಣೇಶ್, ನಿರ್ದೇಶಕರು, ಮೆ॥ ಆದರ್ಶ ನಿವಾಸ್ ಪ್ರೈವೇಟ್ ಲಿಮಿಟೆಡ್, (ಶ್ರೀ ಮಂಜುನಾಥ್ ಬಿಜ್ಜಳ್ಳಿ ವ್ಯವಸ್ಥಾಪಕ ನಿರ್ದೇಶಕರು, ಮೆ॥ ಬೆಂಗಳೂರು ಬೆಸ್ಟ್ ರಿಯಾಲಿಟಿ ಪ್ರೈವೇಟ್ ಲಿಮಿಟೆಡ್ ಹಾಗೂ ಶ್ರೀಮತಿ ಪದ್ಮಿನಿ ಮಂಜುನಾಥ್, ಕೋಂ ಮಂಜುನಾಥ್ ಬಿಜ್ಜಳ್ಳಿ ರವರುಗಳ ಪರವಾಗಿ ನೋಂದಾಯಿತ ಜಿಪಿಎ ಹೋಲ್ಡರ್ ಮತ್ತು

ಜಂಟಿ ಅಭಿವೃದ್ಧಿದಾರರು), ರವರು ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ಹುತ್ತನಹಳ್ಳಿ ಗ್ರಾಮದ ಸ.ನಂ. 111/1 ರಲ್ಲಿ 1ಎ–20ಗು, 111/2 ರಲ್ಲಿ 0ಎ–37ಗು, 112/1 ರಲ್ಲಿ 2ಎ–37ಗು, 112/2 ರಲ್ಲಿ 0ಎ–20ಗು, 122 ರಲ್ಲಿ 5ಎ–05ಗು, 123/1 ರಲ್ಲಿ 2ಎ–23.04ಗು, 123/3 ರಲ್ಲಿ 0ಎ–26ಗು, 123/4 ರಲ್ಲಿ 1ಎ–29ಗು, 126/1 ರಲ್ಲಿ 0ಎ-20ಗು, 171 ರಲ್ಲಿ 2ಎ–0ಗು, 172 ರಲ್ಲಿ 2ಎ–0ಗು ಮತ್ತು 173 ರಲ್ಲಿ 3ಎ–28ಗು ಒಟ್ಟು 24ಎಕರೆ–05.04 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ಈ ಹಿಂದೆ ಅನುಮೋದಿಸಲಾಗಿರುವ ಮಾರ್ಪಡಿತ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಗೆ ಹೆಚ್ಚುವರಿಯಾಗಿ, ಸ.ನಂ 60/1 ರಲ್ಲಿ 0ಎ–28ಗು, 60/2 ರಲ್ಲಿ 0ಎ–27ಗು, 60/3 ರಲ್ಲಿ 0ಎ-27ಗು, 60/4ಪಿ ರಲ್ಲಿ 0ಎ–13ಗು, 61 ರಲ್ಲಿ 0ಎ–26ಗು, 122/2 ರಲ್ಲಿ 0ಎ–19ಗು, 122/3 ರಲ್ಲಿ 1ಎ–00ಗು, 123/1 ರಲ್ಲಿ 0ಎ–33ಗು, 123/2 ರಲ್ಲಿ 1ಎ–05ಗು, 126/1 ರಲ್ಲಿ 0ಎ–18ಗು, 126/1 ರಲ್ಲಿ 1ಎ–20ಗು, 126/2 ರಲ್ಲಿ 0ಎ-05ಗು, 126/3 ರಲ್ಲಿ 0ಎ–06ಗು, 127 ರಲ್ಲಿ 2ಎ–00ಗು, 128 ರಲ್ಲಿ 1ಎ–03ಗು, 129ಪಿ ರಲ್ಲಿ 2ಎ–00ಗು, 130/1ಪಿ ರಲ್ಲಿ 2ಎ–10ಗು, 131/1 ರಲ್ಲಿ 2ಎ–11ಗು, 174 ರಲ್ಲಿ 1ಎ–38ಗು, 175 ರಲ್ಲಿ 3ಎ–35ಗು, 176 ರಲ್ಲಿ 3ಎ–36ಗು, 177 ರಲ್ಲಿ 2ಎ–16ಗು ಒಟ್ಟು 30ಎ–16ಗು ಸೇರಿ ಒಟ್ಟಾರೆಯಾಗಿ 54ಎ–21.04ಗು ಅಥವಾ 220677.06 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಅನುಮೋದನೆಗೆ ಪರಿಗಣಿಸಲಾದ ವಸತಿ ಉಪಯೋಗದ "ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ" ಸೂಚಿಸಲಾದ ಒಟ್ಟು 343 ವಸತಿ ಘಟಕ (ವಿಲ್ಲಾ) ಕಟ್ಟಡಗಳನ್ನು ನಿರ್ಮಿಸುವ ಸಂಬಂಧ ಪ್ರಾಧಿಕಾರದಿಂದ ವಸತಿ ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ಉಲ್ಲೇಖ (1) ರಂತೆ ಅರ್ಜಿ ಸಲ್ಲಿಸಿರುತ್ತಾರೆ.

ವಸತಿ ಉಪಯೋಗದ ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಸೂಚಿಸಲಾದ ಒಟ್ಟು 343 ವಸತಿ ಘಟಕ (ವಿಲ್ಲಾ) ಕಟ್ಟಡಗಳನ್ನು ನಿರ್ಮಿಸುವ ಸಂಬಂಧ ಪ್ರಾಧಿಕಾರದಿಂದ ವಸತಿ ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರ ಮಂಜೂರು ಮಾಡುವ ಸಂಬಂಧ ಉಲ್ಲೇಖ (2) ರಂತೆ ಈ ಪ್ರಾಧಿಕಾರದ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ ಅಗತ್ಯ ಶುಲ್ಕಗಳನ್ನು ಪಾವತಿಸಿ, ಕಟ್ಟಡ ನಕ್ಷೆಯ ನೀಲಿ ಪ್ರತಿಗಳನ್ನು ಅರ್ಜಿದಾರರು/ಅಭಿಯಂತರರ ಸಹಿಗಳೊಂದಿಗೆ ಸಲ್ಲಿಸಲು ಸೂಚಿಸಲಾಗಿರುತ್ತದೆ.

ಉಲ್ಲೇಖ (3) ರಂತೆ ಈ ಕಛೇರಿಯಿಂದ ವಸತಿ ಉಪಯೋಗದ ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ.

ಉಲ್ಲೇಖ (4) ರಂತೆ ಅರ್ಜಿದಾರರು ನಿಗದಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿ, ಅನುಮೋದಿತ ಪರಿಷ್ಕೃತ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ನಮೂದಿಸಿರುವ ಒಟ್ಟಾರೆಯಾಗಿ 343 ವಸತಿ ಘಟಕ (ವಿಲ್ಲಾ) ಕಟ್ಟಡಗಳನ್ನು ನಿರ್ಮಿಸುವ ಸಂಬಂಧ ಪ್ರಾಧಿಕಾರದಿಂದ ವಸತಿ ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರವನ್ನು ಮಂಜೂರು ಮಾಡಲು ಉದ್ದೇಶಿತ ಕಟ್ಟಡದ ನಕ್ಷೆಯ ನೀಲಿ ಪ್ರತಿಗಳನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ವಯ ಈ ಕಛೇರಿಯಿಂದ ಉಲ್ಲೇಖ (3) ರಂತೆ ಅನುಮೋದನೆ ನೀಡಲಾದ ವಸತಿ ಉಪಯೋಗದ **"ಪರಿಷ್ಕೃತ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಸೂಚಿಸಲಾದ ಒಟ್ಟು 343 ವಸತಿ ಘಟಕ (ವಿಲ್ಲಾ) ಕಟ್ಟಡಗಳನ್ನು"** ನಿರ್ಮಾಣ ಮಾಡುವ ಸಂಬಂಧ ಈ ಕೆಳಕಂಡ ನಿಬಂಧನೆಗಳೊಂದಿಗೆ ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರವನ್ನು ಮಂಜೂರು ಮಾಡಲಾಗಿದೆ.

**<u>ನಿಬಂಧನೆಗಳು</u>**

1. ಈ ಹಿಂದೆ 24ಎ–05.25ಗು ವಿಸ್ತೀರ್ಣ ಪ್ರದೇಶಕ್ಕೆ ಅನುಮೋದನೆ ನೀಡಲಾದ ಪರಿಷ್ಕೃತ ವಸತಿ ಅಭಿವೃದ್ಧಿ ನಕ್ಷೆಯಂತೆ ಸೂಚಿಸಲಾದ ಒಟ್ಟು 146 ವಸತಿ ಘಟಕಗಳಿಗೆ ಸಂಬಂಧಿಸಿದಂತೆ ಈ ಪ್ರಾಧಿಕಾರದ ಪ್ರಾರಂಭಿಕ ಪ್ರಮಾಣ ಪತ್ರ ಸಂಖ್ಯೆ : ಬಿಐಎಪಿಎ/ಟಿಪಿ02/ಸಿಸಿ/30/2017–18, ದಿನಾಂಕ: 15/06/2019 ರನ್ವಯ ಪ್ರಾರಂಭಿಕ ಪ್ರಮಾಣ ಪತ್ರ ಮಂಜೂರು ಮಾಡಲಾಗಿದ್ದು, ಅನುಮೋದನೆ ನೀಡಲಾದ 146 ವಸತಿ ಘಟಕಗಳು ಸೇರಿದಂತೆ ಪ್ರಸ್ತುತ ಒಟ್ಟಾರೆಯಾಗಿ 343 ವಸತಿ ಘಟಕಗಳಿಗೆ ಕಟ್ಟಡ ನಕ್ಷೆಗಳಿಗೆ ಅನುಮೋದನೆ ನಿಡುತ್ತಿರುವುದರಿಂದ ಈ ಪ್ರಾಧಿಕಾರದ ಪ್ರಾರಂಭಿಕ ಪ್ರಮಾಣ ಪತ್ರ ಸಂಖ್ಯೆ ಬಿಐಎಪಿಎ/ಟಿಪಿ02/

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110
ದೂ. : 080-29566001, 080-27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

ಸಿಸಿ/30/2017-18, ದಿನಾಂಕ: 15/06/2019 ರಂತೆ ನೀಡಲಾಗಿರುವ ಕಟ್ಟಡ ನಕ್ಷೆ ಅನುಮೋದನೆ ಹಾಗೂ ಪ್ರಾರಂಭಿಕ ಪ್ರಮಾಣ ಪತ್ರವನ್ನು ರದ್ದುಗೊಳಿಸಲಾಗಿದೆ.

2. ಉಲ್ಲೇಖ (3) ರಂತೆ ವಸತಿ ಉಪಯೋಗದ ಪರಿಷ್ಕೃತ ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡಲಾಗಿದ್ದು, ಅನುಮೋದನೆಗೆ ಸಂಬಂಧಿಸಿದಂತೆ ವಿಧಿಸಲಾದ ಎಲ್ಲಾ ನಿಬಂಧನೆಗಳನ್ನು ಅರ್ಜಿದಾರರು ತಪ್ಪದೇ ಪಾಲಿಸತಕ್ಕದ್ದು.

3. ಯೋಜಿಸಿರುವ ಕಟ್ಟಡವನ್ನು 'ವಸತಿ' ಉದ್ದೇಶಕ್ಕಾಗಿಯೇ ಉಪಯೋಗಿಸಬೇಕು.

4. ಈ ಪ್ರಾರಂಭಿಕ ಪ್ರಮಾಣ ಪತ್ರವನ್ನು ಎರಡು ವರ್ಷದ ಅವಧಿಗೆ ಅಂದರೆ <u>ದಿನಾಂಕ: 13/01/2021</u> ರಿಂದ <u>12/01/2023</u> ರವರೆಗೆ ಮಾತ್ರ ನೀಡಲಾಗಿರುತ್ತದೆ.

5. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಪ್ರಕಾರ ಇದು ಪ್ರಾರಂಭಿಕ ಪ್ರಮಾಣ ಪತ್ರವಾಗಿದ್ದು, ಈ ಪತ್ರದ ಅಧಾರದ ಮೇಲೆ ಅವಶ್ಯಕವಾಗಿರುವ ಖಾತೆ / ಇತರೆ ಪರವಾನಿಗೆಯನ್ನು **ಮೀನುಕುಂಟೆ ಗ್ರಾಮ** ಪಂಚಾಯ್ತಿರವರಿಂದ ಪಡೆಯದೇ ಅಭಿವೃದ್ಧಿ ಕಾರ್ಯ ಕೈಗೊಳ್ಳಬಾರದು.

6. ಕಟ್ಟಡ ಕಟ್ಟಲು ಪರವಾನಿಗೆಯನ್ನು **ಮೀನುಕುಂಟೆ ಗ್ರಾಮ** ಪಂಚಾಯ್ತಿಯಿಂದ ಪಡೆಯಬೇಕು.

7. ಕಟ್ಟಡವನ್ನು ಹಾಲಿ ಇರುವ ವಲಯ ನಿಯಮಾವಳಿ ಹಾಗೂ ಕಟ್ಟಡದ ವಿಧಿಯ ಪ್ರಕಾರ ಕಟ್ಟಬೇಕು. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಈ ಪ್ರಾರಂಭಿಕ ಪ್ರಮಾಣ ಪತ್ರದ ಮೂಲಕ ಅನುಮೋದಿಸಿರುವ ನಕ್ಷೆಯಂತೆಯೇ ಕೈಗೊಳ್ಳಬೇಕು. ಬೆಳವಣಿಗೆಯಲ್ಲಿನ ಯಾವುದೇ ಬದಲಾವಣೆಯನ್ನು ಈ ಕಛೇರಿಯ ಪೂರ್ವಾನುಮತಿ ಪಡೆಯದೇ ಮಾಡತಕ್ಕದ್ದಲ್ಲ.

8. 'ವಸತಿ' ಉಪಯೋಗಕ್ಕೆ ಕಟ್ಟಡ ಕಟ್ಟಲು ನಕ್ಷೆಯಲ್ಲಿ ಬಿಟ್ಟಿರುವಂತೆ ನಡುಜಾಗವನ್ನು ಬಿಟ್ಟು ಕಟ್ಟಡ ಕಟ್ಟತಕ್ಕದ್ದು.

9. ಕಟ್ಟಡದ ಮತ್ತು ಯಾವುದೇ ಅಭಿವೃದ್ಧಿಯ ತಳಪಾಯ, ಅಗ್ನಿಶಾಮಕ ವ್ಯವಸ್ಥೆ ಹಾಗೂ ಇತರ ಭದ್ರತಾ ವ್ಯವಸ್ಥೆಗಳು ಅರ್ಜಿದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಪ್ರಮಾಣ ಪತ್ರ ಬದ್ಧವಲ್ಲ ಹಾಗೂ ಪ್ರಾಧಿಕಾರವು ಜವಾಬ್ದಾರರಾಗುವುದಿಲ್ಲ.

10. ಕಟ್ಟಡ ಭದ್ರತೆಯ ಕುರಿತು ನುರಿತ (Structural Engineer) ತಜ್ಞರಿಂದ Structural Details ಪಡೆದು ಅದರಂತೆ ನಿರ್ವಹಿಸುವುದು ಹಾಗೂ ಅವಶ್ಯಕ ಮುಂಜಾಗ್ರತೆಗಳನ್ನು ಕೈಗೊಳ್ಳತಕ್ಕದ್ದು. ಈ ಕುರಿತು ಪ್ರಾಧಿಕಾರಕ್ಕೆ ಯಾವುದೇ ಜವಾಬ್ದಾರಿ ಇರುವುದಿಲ್ಲ.

11. ಪ್ರಸ್ತಾವನೆ ಸಂಬಂಧ ಬೆಸ್ಕಾಂ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು.

12. ಪ್ರಸ್ತಾವನೆ ಸಂಬಂಧ ಭಾಗಶಃ ಪ್ರದೇಶಕ್ಕೆ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾರವರಿಂದ ದಿನಾಂಕ: 07/04/2015 ರಂದು ನಿರಾಕ್ಷೇಪಣಾ ಪತ್ರ ಪಡೆದಿದ್ದು, ಸದರಿ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಂಬಂಧನೆಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ಹೆಚ್ಚುವರಿಯಾಗಿ ಅನುಮೋದನೆ ಪಡೆಯಲಾದ ವಸತಿ ಘಟಕಗಳಿಗೆ ಸಂಬಂಧಿಸಿದಂತೆ ಕಟ್ಟಡ ಕಾಮಗಾರಿ ಪ್ರಾರಂಭ ಮಾಡುವ ಪೂರ್ವದಲ್ಲಿ ಅರ್ಜಿದಾರರು ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ರವರಿಂದ ಪರಿಷ್ಕೃತ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

13. ಪ್ರಸ್ತಾವನೆ ಸಂಬಂಧ ಭಾಗಶಃ ಪ್ರದೇಶಕ್ಕೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ದಿನಾಂಕ: 12/11/2013 ರಂದು ನಿರಾಕ್ಷೇಪಣಾ ಪತ್ರ ಪಡೆದಿದ್ದು, ಸದರಿ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ಹೆಚ್ಚುವರಿಯಾಗಿ ಅನುಮೋದನೆ ಪಡೆಯಲಾದ ವಸತಿ ಘಟಕಗಳಿಗೆ ಸಂಬಂಧಿಸಿದಂತೆ ಕಟ್ಟಡ ಕಾಮಗಾರಿ ಪ್ರಾರಂಭ ಮಾಡುವ ಪೂರ್ವದಲ್ಲಿ ಅರ್ಜಿದಾರರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ಪರಿಷ್ಕೃತ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

14. ಪ್ರಸ್ತಾವನೆ ಸಂಬಂಧ ಭಾಗಶಃ ಪ್ರದೇಶಕ್ಕೆ State Level Environment Impact Assessment Authority ಇಲಾಖೆಯ ನಿರಾಕ್ಷೇಪಣಾ ಪತ್ರ ಸಂಖ್ಯೆ: SEIAA 220 CON 2013, ದಿನಾಂಕ: 03/10/2013 ರಂದು ನಿರಾಕ್ಷೇಪಣಾ ಪತ್ರ ಪಡೆದಿದ್ದು, ಸದರಿ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ಹೆಚ್ಚುವರಿಯಾಗಿ ಅನುಮೋದನೆ ಪಡೆಯಲಾದ ವಸತಿ ಘಟಕಗಳಿಗೆ ಸಂಬಂಧಿಸಿದಂತೆ ಕಟ್ಟಡ ಕಾಮಗಾರಿ ಪ್ರಾರಂಭ ಮಾಡುವ ಪೂರ್ವದಲ್ಲಿ ಅರ್ಜಿದಾರರು State Level Environment Impact Assessment Authority ರವರಿಂದ ಪರಿಷ್ಕೃತ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

15. ಕಾಮಗಾರಿಗಳಿಂದಾಗಿ ಪರಿಸರವು ಮಾಲಿನ್ಯವಾಗದಂತೆ ಎಚ್ಚರಿಕೆ ವಹಿಸತಕ್ಕದ್ದು ಮತ್ತು ಸ್ವಾಭಾವಿಕ ಮಳೆಯ ನೀರು ಇಂಗಿ ಹೋಗಲು ವ್ಯವಸ್ಥೆ (Rain Water harvesting) ಯನ್ನು ಮಾಡತಕ್ಕದ್ದು ಮತ್ತು ಸೌರಶಕ್ತಿ ವ್ಯವಸ್ಥೆಯನ್ನು ಕಟ್ಟಡದಲ್ಲಿ ಒದಗಿಸತಕ್ಕದ್ದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ನಿವೇಶನದ ಮುಂಭಾಗದಲ್ಲಿ ಗಿಡ/ಮರವನ್ನು ಬೆಳೆಸತಕ್ಕದ್ದು.

16. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ water (Prevention and Control of Pollution) Act 1974 ರ ಕಲಂ 25 ರ ರೀತ್ಯ ಸೂಕ್ತ ಪ್ರಮಾಣದ Sewage Treatment Plant (ತ್ಯಾಜ್ಯನೀರು ಸಂಸ್ಕರಣಾ ಘಟಕ) ಸ್ಥಾಪಿಸಲು consent for Establishment ಪೂರ್ವಾನುಮತಿ ಪಡೆಯದೇ ಪ್ರಶ್ನಿತ ನಿವೇಶನ / ಜಾಗದಲ್ಲಿ ನೆಲ ಅಗಿಯುವಿಕೆ ಒಳಗೊಂಡಂತೆ ಯಾವುದೇ ರೀತಿಯ ಕಟ್ಟಡ ನಿರ್ಮಾಣ ಅಥವಾ ವಸತಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದಲ್ಲ. ಉದ್ದೇಶಿತ ಕಟ್ಟಡ / ನೆಲ ಅಭಿವೃದ್ಧಿ ಕಾಮಗಾರಿಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ consent for Establishment ಅನುಮತಿ ಪಡೆಯತಕ್ಕದ್ದು.

17. ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ-2016 ರ ಕಲಂ (3) ಮತ್ತು (4) ರ ರೀತ್ಯ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ದಲ್ಲಿ ವಸತಿ ಯೋಜನೆಯ ಪೂರ್ವಭಾವಿ ನೋಂದಣಿಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.

18. ಈ ಪ್ರಮಾಣ ಪತ್ರ ನೀಡಿರುವ ಮಾತ್ರಕ್ಕೆ ಯಾವುದೇ ಸೌಲಭ್ಯವನ್ನು ಅರ್ಜಿದಾರರಿಗೆ ನೀಡುವ ಹೊಣೆಗಾರಿಕೆ ಪ್ರಾಧಿಕಾರಕ್ಕಿರುವುದಿಲ್ಲ.

19. ಈ ಪ್ರಾರಂಭಿಕ ಪ್ರಮಾಣ ಪತ್ರದೊಡನೆ ಅನುಮೋದಿಸಲ್ಪಟ್ಟಿರುವ ನಕ್ಷೆಯು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.

ಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110

ದೂ. : 080-29566001, 080-27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

20. ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳಬಾರದು.

21. ಈ ಪ್ರಾಧಿಕಾರದ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

22. ಈ ಅನುಮತಿಯನ್ನು ಉಲ್ಲಂಘಿಸಿ ಅಭಿವೃದ್ಧಿಯನ್ನು ಕೈಗೊಂಡರೆ ಅಥವಾ ನೀಡಿರುವ ಮಾಹಿತಿಗಳು ದೋಷಪೂರ್ಣವಾಗಿದ್ದರೆ ಅನುಮತಿಯನ್ನು ಹಿಂತೆಗೆದುಕೊಳ್ಳಲಾಗುವುದಲ್ಲದೇ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು.

23. ಅಂತರಾಷ್ಟ್ರೀಯ ವಾಯು ನೆಲೆಯ ಪರಿಸರದಲ್ಲಿ ಬರುವುದರಿಂದ ಶಬ್ದಮಾಲಿನ್ಯ ಸಹಿಸಿಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

24. ಇತರೆ ಇಲಾಖೆಗಳಿಂದ ಅಗತ್ಯವಿರುವ ಅನುಮತಿ/ನಿರಾಕ್ಷೇಪಣಾ ಪತ್ರಗಳನ್ನು ಸಹ ಪಡೆಯತಕ್ಕದ್ದು.

25. ಅರ್ಜಿದಾರರು ಸಲ್ಲಿಸಿರುವ ಮಾಹಿತಿ/ದಾಖಲಾತಿಗಳು ಸುಳ್ಳು ಅಥವಾ ಪೋರ್ಜರಿಗಳಾಗಿದ್ದರೆ ಈ ಕಛೇರಿಯಿಂದ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರವು ತಂತಾನೆ ರದ್ದಾಗುತ್ತದೆ.

13.1.24

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಬೆಂಗಳೂರು ಅಂತರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ.

<u>ಇವರಿಗೆ:</u>
**ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು,**
ಮೀನುಕುಂಟೆ ಗ್ರಾಮ ಪಂಚಾಯ್ತಿ,
ಜಾಲ ಹೋಬಳಿ, ಯಲಹಂಕ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ.

ಕಟ್ಟಡ ನಕ್ಷೆಯ 4 ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸುತ್ತಾ, ಅನುಮೋದನೆ ನೀಡಲಾದ ವಸತಿ ಘಟಕಗಳಿಗೆ ಸಂಬಂಧಿಸಿದಂತೆ ಕಟ್ಟಡ ಪರವಾನಿಗೆ ನೀಡುವ ಪೂರ್ವದಲ್ಲಿ ಪ್ರಸ್ತಾವನೆಯಲ್ಲಿರುವ ಪ್ರದೇಶಕ್ಕೆ ನಿಯಮಾವಳಿ ಪ್ರಕಾರ ಇ-ಖಾತಾ ನೋಂದಾವಣಿ ಮಾಡಿಕೊಂಡು ಪ್ರಾರಂಭಿಕ ಪ್ರಮಾಣ ಪತ್ರದಲ್ಲಿ ವಿಧಿಸಿರುವ ನಿಬಂಧನೆಗಳಲ್ಲಿ ಕ್ರ.ಸಂ (12,13,14) ರಲ್ಲಿ ಸೂಚಿಸಿರುವಂತೆ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ, State Level Environment Impact Assessment Authority ಇಲಾಖೆಯಿಂದ ಕಡ್ಡಾಯವಾಗಿ ಪರಿಷ್ಕೃತ ನಿರಾಕ್ಷೇಪಣಾ ಪತ್ರಗಳನ್ನು ಪಡೆಯತಕ್ಕದ್ದು.

<u>ಪ್ರತಿಯನ್ನು:</u>
1. ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ನಂ. 1/14, 2 ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ ಕಾಂಪೌಂಡ್, 3 ನೇ ಕ್ರಾಸ್ ಮಿಷನ್ ರಸ್ತೆ, ಬೆಂಗಳೂರು-560027 ರವರ ಮಾಹಿತಿಗಾಗಿ.
2. ಶ್ರೀ ಬಿ.ಎಂ. ಕರುಣೇಶ್, ನಿರ್ದೇಶಕರು, ಮೆ॥ ಆದರ್ಶ ನಿವಾಸ್ ಪ್ರೈವೇಟ್ ಲಿಮಿಟೆಡ್, (ಶ್ರೀ ಮಂಜುನಾಥ್ ಬಿಜ್ಜಳ್ಳಿ ವ್ಯವಸ್ಥಾಪಕ ನಿರ್ದೇಶಕರು, ಮೆ॥ ಬೆಂಗಳೂರು ಬೆಸ್ಟ್ ರಿಯಾಲಿಟಿ ಪ್ರೈವೇಟ್ ಲಿಮಿಟೆಡ್ ಹಾಗೂ ಶ್ರೀಮತಿ ಪದ್ಮಿನಿ ಮಂಜುನಾಥ್, ಕೋಂ ಮಂಜುನಾಥ್ ಬಿಜ್ಜಳ್ಳಿ ರವರುಗಳ ಪರವಾಗಿ ನೋಂದಾಯಿತ ಜಿಪಿಎ ಹೋಲ್ಡರ್ ಮತ್ತು ಜಂಟಿ ಅಭಿವೃದ್ಧಿದಾರರು), ನಂ.10, ವಿಠಲ್ ಮಲ್ಯ ರಸ್ತೆ, ಬೆಂಗಳೂರು ರವರ ಮಾಹಿತಿಗಾಗಿ.
3. ಕಛೇರಿ ಪ್ರತಿ.